ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.88-92
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪ್ರೊ .ಎಚ್.ಟಿ. ಪೋತೆ ಯವರ ಚಮ್ಮಾವುಗೆ ಕಥಾ ಸಂಕಲನದಲ್ಲಿ ದಲಿತ ಸಂಸ್ಕೃತಿ

**ಶಿವಪ್ಪ ಹುಣಚಾಳ**
ಸಂಶೋಧನಾ ವಿದ್ಯಾರ್ಥಿ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕ.ವಿ.ವಿ.ಧಾರವಾಡ

***Abstract:***
*ಪ್ರೊ. ಎಚ್. ಟಿ. ಪೋತೆಯವರು ಈ ನಾಡಿನ ದಲಿತ ಬಂಡಾಯ ಸಾಹಿತ್ಯದ ಸಂವೇದನೆಯನ್ನು ಮೈಗೂಡಿಸಿಕೊಂಡು ಬರಹಕ್ಕಿಳಿದ ಬಹುದೊಡ್ಡ ಲೇಖಕರಲ್ಲಿ ಒಬ್ಬರು. ಈ ನಾಡಿನ ವಿಶಿಷ್ಟ ಕಥೆಗಾರ, ಕಾದಂಬರಿಕಾರ, ವಿಮರ್ಶಕ, ಅನುವಾದಕ, ಸಂಶೋಧಕ ಹಾಗೂ ಚಿಂತಕರೂ ಆಗಿದ್ದಾರೆ. ಅಂಬೇಡ್ಕರ್, ಪೆರಿಯಾರ್, ಜ್ಯೋತಿಬಾ ಫುಲೆ, ಬಿ. ಶ್ಯಾಮಸುಂದರ್, ಕುಮಾರ ಕಕ್ಕಯ್ಯ ಪೋಳ್, ದಲಿತಲೋಕ, ಮತ್ತು ಶರಣ ಸಂಸ್ಕೃತಿ ಅಷ್ಟೇ ಅಲ್ಲದೆ ವಿಚಾರವಿಮರ್ಶೆ, ಸಂಶೋಧನೆ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಪೋತೆಯವರು ಚಮ್ಮಾವುಗೆ ಹಾಗೂ ಬೆತ್ತಲಾದ ಚಂದ್ರ ಎಂಬ ಎರಡು ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಇಲ್ಲಿ ಪ್ರಸ್ತುತ ನಾನು ನನ್ನ ಸಂಶೋಧನಾ ಲೇಖನಕ್ಕೆ ಅವರ ಚಮ್ಮಾವುಗೆ ಕಥಾ ಸಂಕಲನವನ್ನು ಆಯ್ದ ಕಥೆಗಳನ್ನು ಮಾತ್ರ ಸೀಮಿತಗೊಳಿಸಿಕೊಂಡಿದ್ದೇನೆ.*

***Keywords:*** *ಕನ್ನಡ ಸಾಹಿತ್ಯ, ಕಥಾ ಸಂಕಲನ, ಎಚ್.ಟಿ.ಪೋತೆ, ಚಮ್ಮಾವು, ಬೆತ್ತಲಾದ ಚಂದ್ರ.*

## ಪೀಠಿಕೆ

ಪ್ರೊ. ಎಚ್. ಟಿ. ಪೋತೆ ಅವರ ಮೊದಲ ಕಥಾ ಸಂಕಲನವಾದ ಚಮ್ಮಾವುಗೆಯಲ್ಲಿ ಒಟ್ಟು ಎಂಟು ಕಥೆಗಳಿವೆ. ಅಪ್ಪ, ಅವ್ವ, ಬರ, ಭಂಗ, ಚಮ್ಮಾವುಗೆ, ವತನ, ಚಲುವ, ದಳಿ ಹೀಗೆ ಈ ಎಂಟು ಕಥೆಗಳಲ್ಲಿ ದಲಿತ ಜನಾಂಗದ ಬದುಕಿನ ಸಂಕಟ, ತಲ್ಲಣ, ನೋವುಗಳನ್ನು ಹಾಗೂ ಮೇಲ್ವರ್ಗದ ದೌರ್ಜನ್ಯವನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ. ಭೂಮಾಲೀಕರು ದಲಿತ ಸಮುದಾಯದ ಮೇಲೆ ನಡೆಸುವ ದಬ್ಬಾಳಿಕೆಯನ್ನು ಅದಕ್ಕೆ ಪ್ರತಿರೋಧವಾಗಿ ದಲಿತರು ಒಡ್ಡುವ ಸವಾಲುಗಳು ಅದರೊಟ್ಟಿಗೆ ಅಕ್ಷರ ಕಲಿಕೆಯಿಂದ ದಲಿತರ ಉದ್ಧಾರ ಸಾಧ್ಯ ಎಂಬುವುದು ಇಲ್ಲಿನ ಎಲ್ಲಾ ಕಥೆಗಳು ಅಭಿವ್ಯಕ್ತಿಸುತ್ತಾರೆ.

ಚಮ್ಮಾವುಗೆ ಕಥಾ ಸಂಕಲನದ ಮೊದಲ ಕಥೆಯಾದ **"ಅಪ್ಪ"** ಕಥೆಯಲ್ಲಿ ಅನಾದಿ ಕಾಲದಿಂದಲೂ ತಿಪ್ಪಣ ತಾನು ಅನುಭವಿಸಿಕೊಂಡು ಬಂದಿದ್ದ ಶೋಷಣೆಯನ್ನು ತನ್ನ ಮಗ ಅನುಭವಿಸಬಾರದೆಂದು ತಿಳಿದು ಅವನಿಗೆ ವಿದ್ಯಾಭ್ಯಾಸ ಕೊಡಿಸಿ ಮೇಲ್ವರ್ಗದ ದಬ್ಬಾಳಿಕೆಯಿಂದ ಬಿಡುಗಡೆಗೊಳಿಸುವ ಕನಸು ಕಂಡವನು. ಆದರೆ ಊರಿನ ಶ್ರೀಮಂತನ ಸಾಲವನ್ನು ತೀರಿಸಲು ತಿಪ್ಪಣ್ಣನ ಮಗನನ್ನು ಜೀತಕ್ಕೆ ಇರಿಸಲು ಒತ್ತಾಯ ಮಾಡುತ್ತಾನೆ. ಸಾಹುಕಾರ ಸ್ವತಃ ತಿಪ್ಪಣ್ಣನಿಗೆ ಹೀಗೆ ಹೇಳುತ್ತಾನೆ "ಏ ತಿಪ್ಪಣ್ಣ ಯಾಕ ಬರಿ ಸಾಲಿ ಸಾಲಿ ಅಂತ ಮಕ್ಕಳ್ನ ಸಾಲಿಗಿ ಕಳಿಸ್ತಿ? ಅದಕ್ಕಾಗಿ ಹೊಲ ಮನಿ ಒತ್ತಿ ಇಡ್ತಿ? ಸಾಲಗಾರರು ಬಂದಾಗ ತಿಲಿಬಗ್ಗಿಸಿಕೊಂಡು ಕೂಡ್ತಿ

***Please cite this article as:*** ಶಿವಪ್ಪ ಹುಣಚಾಳ. (2024). ಪ್ರೊ .ಎಚ್.ಟಿ. ಪೋತೆ ಯವರ ಚಮ್ಮಾವುಗೆ ಕಥಾ ಸಂಕಲನದಲ್ಲಿ ದಲಿತ ಸಂಸ್ಕೃತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(4), 88–92

ಅದರ ಬದಲು ಜೀತಾಗೀತಾ ಇಡಬೇಕಪ್ಪ, ಇಟ್ಟರ ನಿನ್ನ ಪಡಿಪಾಟ್ಲ ದೂರಾಗ್ತದ, ಸಾಲನು ತೀರ್ತದ, ಇರುತನಕಾ ಸುಖವಾಗಿರಬಹುದು ನೋಡಿದ್ಯಲ್ಲ, ಆ ನಿಮ್ಮ ಓಣ್ಯಾಗಿನ ಮಸಣ್ಣನ ತಮ್ಮ ಹೆಂಗ ಮಾಡ್ಯಾನ? ಅದಕ್ಕ ಸ್ವಲ್ಪ ತಿಳಕೋ, ಈಗರ ಹುಶ್ಯಾರಾಗು"[1] ಎನ್ನುವ ಮೂಲಕ ಸಾವುಕಾರ ಜೀತಪದ್ದತಿ ಇನ್ನೂ ಜೀವಂತವಾಗಿಡುವ ಹುನ್ನಾರ ಹಾಗೆನೇ ಈ ಜೀತ ಪದ್ದತಿಯ ಮೂಲಕ ದಲಿತರನ್ನು ಬಂಧಿಸಲು ಅದೇ ಜಾತಿಯ ಜನರ ಉದಾಹರಣೆ ಕೊಟ್ಟು ಅವರನ್ನು ಬಂಧಿಸಲು ಹೊರಟ ಸಾವುಕಾರ ಅದೇ ರೀತಿ ಸಾವುಕಾರರಿಂದ ಬಿಡಿಸಿಕೊಂಡು ಶಿಕ್ಷಣದ ಮೂಲಕ ಆ ವ್ಯವಸ್ಥೆಯಿಂದ ಹೊರಬರಲು ಹಾತೊರೆಯುವ ದಲಿತರ ಮನಸ್ಥಿತಿಯವನ್ನು ಈ ಕಥೆಯ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ. ಅಷ್ಟೇ ಅಲ್ಲದೆ ಈ ಕಥೆಯಲ್ಲಿ ಜಮೀನ್ದಾರರ ದಬ್ಬಾಳಿಕೆ ಇದರಿಂದ ಸೃಷ್ಟಿಯಾಗುವ ಸಾಮಾಜಿಕ ಸಂಘರ್ಷ, ಕೆಳವರ್ಗದವರ ಸಮಸ್ಯೆಗಳು, ದಲಿತರ ಹೀನಾಯ ಸ್ಥಿತಿಯನ್ನು ಕಾಣಬಹುದು.

ಈ ಮೇಲ್ವರ್ಗದವರ ದಬ್ಬಾಳಿಕೆ, ಜೀತಗಾರಿಕೆ ಹಾಗೂ ಶೋಷಣೆಯಿಂದ ತಪ್ಪಿಸಿಕೊಳ್ಳಬೇಕಾದರೆ ಅಕ್ಷರ ಕಲಿಕೆಯಿಂದ ಸಾಧ್ಯ ಎಂದು ತಿಪ್ಪಣ್ಣ ತನ್ನ ಮಗನಿಗೆ ಈ ರೀತಿ ಹೇಳುತ್ತಾನೆ "ನೋಡಪ್ಪಾ ನಾವು ಗಿರಣಿ ಇಟ್ಟರ ಯಾರು ಬೀಸಲಿಕ್ಕ ಬರಾಂಗಿಲ್ಲ, ಅಂಗಡಿ ಇಟ್ಟರ ಯಾರೂ ನಮ್ಮ ಅಂಗಡಿಯಲ್ಲಿ ಸಾಮನ ಖರೀದಿ ಮಾಡಾಂಗಿಲ್ಲ, ಅದಕ್ಕ ಸಾಲಿ ಒಂದ ಇದಕ್ಕ ಮದ್ದಪ್ಪ, ಅದನ್ನ ಯಾರು ಕಸಗೊಳಂಗಿಲ್ಲ"[2] ಅಕ್ಷರ ಕಲಿಕೆಯಿಂದ ಮಾತ್ರ ದಲಿತರ ಉದ್ದಾರ ಸಾಧ್ಯ ಆ ಶಕ್ತಿ ಇರುವುದು ಅಕ್ಷರಗಳಿಗೆ ಮಾತ್ರ ಎಂಬ ಸತ್ಯ ಡಾ. ಎಲ್ ಹನುಮಂತಯ್ಯ ಮೊದಲಾದ ಎಲ್ಲಾ ಕತ್ತಲ ಜಗತ್ತಿನ ಮೊದಲ ತಲೆಮಾರಿನ ಬರಹಗಾರರು ಬಹಿರಂಗಗೊಳಿಸಿದ್ದಾರೆ. ಅದೇ ಹಾದಿಯಲ್ಲಿದ್ದ ತೀವ್ರತರದ ದಲಿತ ಅಸ್ಮಿತೆಯನ್ನು ಹೊಂದಿರುವ ಮೋತೆಯವರ ಅಪ್ಪ ಕಥೆಯಲ್ಲಿ ಸೂಚ್ಯವಾಗಿ ಹೇಳಿದ್ದಾರೆ.

ಚಮ್ಮಾವು ಕಥಾ ಸಂಕಲನದ ಇನ್ನೊಂದು ಕಥೆಯಾದ **"ಬರ"** ಈ ಕಥೆಯು ಹನುಮನ ಮದುವೆಯೊಂದಿಗೆ ಆರಂಭವಾಗುತ್ತದೆ. ಹನುಮನಿಗೆ ಮದುವೆ ಬೇಡವಾಗಿದ್ದರು ಅದು ಅವನಿಗೆ ಅನಿವಾರ್ಯವಾಗುತ್ತದೆ. ಹನುಮನು ತನ್ನವರ ಹಿತಕ್ಕಾಗಿ ಯಾವ ತ್ಯಾಗಕ್ಕೂ ಸಿದ್ದನಿರುತ್ತಾನೆ. ಈ ಕಥೆಯಲ್ಲಿ ಬರ ಆವರಿಸುತ್ತದೆ. ಈ ಬರಕ್ಕೆ ದಲಿತ ಬಲಿತ ಎಂಬ ಭೇದಭಾವಿಲ್ಲದೆ ಬರ ಬಿದ್ದಿದೆ. ಹನುಮ ತನ್ನ ಮದುವೆಗೆ ಬಂದ ಗೆಳೆಯನಾದ ಬಸವನ ಮುಂದೆ ಬರ ಬಡತನ, ಜಾತಿಪದ್ದತಿಯಂತಹ ಅನಿಷ್ಟಗಳು ನಾಶವಾಗಬೇಕು ಅಂತ ಹೇಳುತ್ತಾ ಹೆರಿಗೆ ನೋವು ಹೆತ್ತವಳಿಗೆ ಗೊತ್ತು ಎಂಬಂತೆ ಈ ಜಾತಿವ್ಯವಸ್ಥೆಯಿಂದ ಅನುಭವಿಸಿದ ನೋವುಗಳನ್ನು ಬಸವನ ಮುಂದೆ ಹೇಳುತ್ತಾನೆ.

ಜಾತಿವ್ಯವಸ್ಥೆ ಎಷ್ಟು ಈ ಸಮಾಜದಲ್ಲಿ ಬೇರುರಿದೆ ಎಂದರೆ ಬರಗಾಲದ ಪರಸ್ಥಿತಿಯಿಂದಾಗಿ ಹನುಮನ ಹೊಲಕ್ಕೆ ಕೂಲಿಗೆ ಬಂದ ಗೌಡನ ದರ್ಪ, ತಾರತಮ್ಯ, ಮೈಲಿಗೆಗೆ ಮತ್ತು ತನ್ನ ರೊಟ್ಟಿ ಹೊಲದಲ್ಲಿರುವ ಗಿಡದ ತುದಿಗೆ ಕಟ್ಟುತಿದ್ದ ಅಷ್ಟೇ ಅಲ್ಲದೇ ಅವನು ದಲಿತರಿಂದ ಕೂಲಿ ಕೇಳುವುದರಲ್ಲೂ ದಲಿತರ ಮೇಲೆ ತೋರುವ ದರ್ಪಕ್ಕೆ ಏನೂ ಕಡಿಮೆ ಇರಲಿಲ್ಲ ಅನ್ನೊದಕ್ಕೆ ಗೌಡ ಹೀಗೆ ಮಾತನಾಡುತ್ತಾನೆ "ಏ ಭೀಮ್ಯಾ ಕೂಲಿ ಕೊಡೋ ಮಗನ! ಎಂದು ಜೋರು ಮಾಡ್ತಿದ್ನಂತ ಮಾಲಿಕನಾಗಿದ್ದ ನಮ್ಮಪ್ಪ ಅವಮಾನದ ಬೈಗಳುಗಳನ್ನು ಸಹಿಸಿಕೊಂಡು ಹಣಾ ಕೊಡಾಕ ಹೊದ್ರೆ ರೊಕ್ಕಾ ಕೊಡಾಕಂತ ಬಂದು ಅದೇ ನೆಪದಾಗ ನನಗ ಮುಟ್ಟತೇನ ಮಗನ, ನೆಲದ ಮ್ಯಾಲಿಟ್ಟು ದೂರ ಸರದ್ ನಿಲ್ಲು ಅಂತ ಹೇಳಿ ಗದರ್ಸತಿದ್ನಂತ"[3] ಲೇಖಕರು ಈ ಕಥೆಯ ಮೂಲಕ ದಲಿತ ಬಲಿತನಾದರು ಮೇಲ್ವರ್ಗದವರಲ್ಲಿ ಈ ಜಾತಿಯತೆ, ಸಾಮಾಜಿಕ ಸಂಘರ್ಷ ಇನ್ನೂ ನಿಂತಿಲ್ಲ ಅನ್ನೊದಕ್ಕೆ ಈ ಕಥೆ ತಾಜಾ ಉದಾರಹಣೆಯಾಗಿದೆ,

ಹನುಮನ ತಂದೆ ಸಮಾನತೆ ಬರಬೇಕಾದರೆ, ಉಳ್ಳವರ ದರ್ಪ ಕಡಿಮೆ ಆಗಬೇಕಾದರೆ ದಲಿತ ಕಷ್ಟ ಏನು ಅಂತ ಗೊತ್ತಾಗಬೇಕಾದರೆ ಬರಗಾಲ ಬೀಳಬೇಕು ಅಂತ ಹೇಳುತ್ತಾನೆ. ಯಾಕೆ ಅಂತ ಹನುಮ ಕೇಳಿದರೆ "ನಮ್ಮಲ್ಲಿ ಹಣ ಇದ್ರೂ ನಾವು ಕೀಳರು, ಶಿಕ್ಷಣ ಇದ್ರೂ ನಾವು ಕನಿಷ್ಠರು, ಉಂಡುಟ್ಟು ತಿರಗಿದ್ರೂ ಮೇಲಿನವರು ಸಹಿಸಂಗಿಲ್ಲ, ಅವರ ದೃಷ್ಟಿಯಲ್ಲಿ ನಾವು ಮನುಷ್ಯರೇ ಅಲ್ಲ, ಅವರಿಗೂ ಬಡತನ, ನೋವು, ಅವಮಾನ, ಅಂದ್ರೇನು ಎನ್ನುವುದು ಗೊತ್ತಾಗಬೇಕಾದ್ರ ಬರಗಾಲ ಬೀಳಬೇಕು ತಮ್ಮಾ! ಬರಗಾಲ ಬೀಳೊದ್ರಿಂದ ಶ್ರೀಮಂತರ ಸೊಕ್ಕ ಅಡಗ್ತದ, ಗೌಡರ ದರ್ಪ, ದಬ್ಬಾಳಿಕೆ ನಿಂತು ಹೋಗ್ತದ ಇದರಿಂದ ಸಮಾನತೆ ಬಂದ್ರು ಬರಬಹುದು. ಏಕದಕಲ ಆಗಬಹುದು. ಈ ಜಾತಿ ಪದ್ಧತಿ ಹೋಗಲಕ್ಕ ಅದು ಒಂದು ದಾರಿ"[4] ಎಂದು ಹೇಳುವಲ್ಲಿ ಕಥೆಗಾರರು ಇಲ್ಲಿ ದಲಿತರಿಂದಲೇ ಈ ಮಾತುಗಳನ್ನು ಹೇಳಿಸುವಲ್ಲಿ ರೊಚ್ಚಿನ, ಸಿಟ್ಟಿನ ಮಾತುಗಳನ್ನು ಆಡುವಲ್ಲಿ ಸಮಾನತೆಯನ್ನು ಕಾಣುವ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾರೆ. ನಿಜವಾಗಿಯೂ ಈ ಕಥೆಯಲ್ಲಿ ಬರ ಪ್ರೀತಿಗೆ, ಸಂಬಂಧಕ್ಕೆ ಬಂದಿದೆ ಎಂಬುವುದು ಇಲ್ಲಿ ಸೂಚ್ಯವಾಗಿ ತಿಳಿಸಿದ್ದಾರೆ.

ಚಮ್ಮಾವುಗೆ ಕಥಾ ಸಂಕಲನದ ಪ್ರಮುಖ ಕಥೆಯಾದ **"ಚಮ್ಮಾವುಗೆ"** ದಲಿತರಲ್ಲಿಯೇ ಇತ್ತೀಚಿಗೆ ಕಂಡು ಬರುತ್ತಿರುವ ಅಸಹನೆ ಮತ್ತು ಪರಸ್ಪರ ದ್ವೇಷವನ್ನು ಚಿತ್ರಿಸುತ್ತದೆ. ಚೆಲುವಜ್ಜ ಮತ್ತು ಮಾದಜ್ಜ ಎಂಬ ಪಾತ್ರಗಳು ಹೊಲೆ–ಮಾದಿಗರ ಪ್ರತೀಕವಾಗಿ ಮೂಡಿಬಂದಿವೆ. ಚೆಲುವಜ್ಜ ಶ್ರಮದಿಂದ ದುಡಿದು ಆಸ್ತಿ ಸಂಪಾದಿಸಿದರೆ, ಮಾದಜ್ಜ ಬದುಕಿನ ಬಗ್ಗೆ ಅಸಡ್ಡೆಯಿಂದ ಪಾರಂಪರಿಕವಾಗಿ ಬಂದಿದ್ದ ಚಪ್ಪಲಿ ಹೊಲಿಯುವ ಕಾಯಕ ಮಾಡಿಕೊಂಡೆ ಜೀವನ ಸಾಗಿಸುತ್ತಿದ್ದ. ಕೆಳವರ್ಗದಲ್ಲಿಯೇ ಈ ಸಮಕಾಲಿನ ಸಂದರ್ಭದ ಸಂಘರ್ಷಗಳು ನಡೆಯುತ್ತಿರುವುದು ಕಂಡು ಕತೆಗಾರರು ಮೊದಲು ನಾವೆಲ್ಲರೂ ಸಾಮರಸ್ಯದಿಂದ ಇರೋಣ ಇಲ್ಲಾಂದ್ರೆ ಈ ಮೇಲ್ವರ್ಗ ನಮ್ಮಲ್ಲಿಯೇ ಭೇದವನ್ನು ಹುಟ್ಟಿಸಿ ಮತ್ತೆ ನಾವು ನಾವುಗಳೇ ಸಂಘರ್ಷಕ್ಕೆ ಇಳಿಯುವ ಹಾಗೆ ಮಾಡುತ್ತಾರೆ ಅನ್ನೋದಕ್ಕೆ ಈ ಕಥೆಯಲ್ಲಿ ಮಾದಜ್ಜನ ಮೂಲಕ ಈ ಮಾತುಗಳನ್ನು ಹೇಳಿಸುತ್ತಾರೆ. "ತಮಗೋಳ್ಯಾ ಇಂದು ಯಾಕೆ ಹಿಂಗ ಆದೇವು, ನಾ ಯಾಕ ಹೊಲ ಮನಿ ಮಾರಿ ಮಗನಿಗೆ ಓದ್ಸಿದೆ, ಯಾಕಂದ್ರ ಜಾತಿ ಭಾಳ ಕೆಟ್ಟದ್ದು, ನಮ್ಮ ನಮ್ಮಲ್ಲೇ ಆ ಕೇರಿ ಈ ಕೇರಿ ಅಂತ ಜಗಳ ಮಾಡಿಕೊಂಡು ಸುಮ್ಮ್ ಸಮ್ನು ಮಾರಿ ಖರ್ರಗ ಮಾಡಿಕೊಂಡಿವಿ. ಹಾಳು ರಾಜಕೀಯ, ಈ ಜಾತಿ, ಸಮಾಜ ನಮ್ಮನ್ನು ಮುಂದ ಹೋಗಲಾಕ ಬಿಡಂಗಿಲ್ಲ, ಶಿಕ್ಷಣ ಕಲಿಯೋದ್ರಿಂದ ನಮ್ಮ ಮಕ್ಕಳು ಮುಂದೆ ಬರ್ತಾವ ಅದರಿಂದ ಅರಿವು ಬರ್ತಾದ. ಅಣ್ಣ ತಮ್ಮ ತಮ್ಮರಂಗಿದ್ದ ನಮ್ಮನ್ನು ಮನಿಬ್ಯಾರಿ ಮಾಡಿದಲ್ದೆ, ಓಣಿಬ್ಯಾರಿ, ಕೇರಿ ಬ್ಯಾರಿ ಮಾಡಿ ಮ್ಯಾಲಿನವರು ನಮ್ಮನ್ನು ಸುಖವಾಗಿ ಇರ್ಲಾಕ ಬಿಡಂಗಿಲ್ಲ. ಬಿಟ್ಟಿಲ."[5] ಈ ಮಾತಿನಲ್ಲಿ ನಾವೆಲ್ಲರೂ ಮೊದಲು ಶಿಕ್ಷಣವಂತರಾಗಿ ಸಾಮರಸ್ಯದಿಂದ ಇರೋಣ ಈ ಆಧುನಿಕ ಸಮಾಜದಲ್ಲಿಯೂ ಒಡೆದು ಆಳುವ ನೀತಿ ನಿಂತಿಲ್ಲ ಹಾಗಾಗಿ ನಮ್ಮ ನಮ್ಮಲ್ಲೇ ಸಂಘರ್ಷಕ್ಕೆ ಇಳಿಯುವುದಕ್ಕಿಂತ ನಾವೆಲ್ಲರೂ ಒಂದಾಗಿ ಶಿಕ್ಷಣ ಪಡೆದುಕೊಂಡು ವ್ಯವಸ್ಥೆಗೆ ಪ್ರತಿರೋಧ ಒಡ್ಡೋಣ ಎನ್ನುವ ಆಶೆ ನಿಜಕ್ಕೂ ವರ್ತಮಾನಕ್ಕೆ ಸರಿ ಅನಿಸುತ್ತದೆ.

"ಭಂಗ" ಕಥೆಯಲ್ಲಿ ದಲಿತ ಜನಗಳ ನಾಶ ಮಾಡಬೇಕು ಎಂದು ಬಯಸುವ ಮೇಲ್ವರ್ಗದ ಕುತಂತ್ರಕ್ಕೆ ಪ್ರತಿಯಾಗಿ ಅವರ ದರ್ಪ ಭಂಗವಾದದ್ದು ಈ ಕಥೆಯ ವಸ್ತುವಾಗಿದೆ. ಈ ಕಥೆಯಲ್ಲಿ ದಲಿತರಿಗೆ ಮಾನಭಂಗ ಮಾಡಲು ಹೊರಟಿದ್ದ ಸಾಹುಕಾರನ ಕುತಂತ್ರ ಭಂಗವಾಗುವುದೇ ಈ ಕಥೆ ಕೇಂದ್ರವಸ್ತು. ಇಲ್ಲಿ ದಲಿತರ ಆಸ್ತಿ ಹಂಚುವ ನೆಪದಲ್ಲಿ ಅವರ ಮಾನಭಂಗ ಮಾಡಬೇಕೆಂದು ಮುಂದಾಲೋಚನೆ ಮಾಡಿ ಸಾವುಕಾರ ಕೈಗೊಂಡ ಕೆಲಸ ಹುಸಿಯಾಗಿ

ಅವರಿಗೇ ತಿರುಗಬಾಣವಾಗಿ ಅವರನ್ನೇ ಭಂಗಗೊಳಿಸುತ್ತದೆ. ಈ ಕಥೆಯಲ್ಲಿ ಅಕ್ಷರ ಕಲಿತ ದಲಿತ ಕೇರಿಯ ಒಬ್ಬ ವಿದ್ಯಾರ್ಥಿ ತನ್ನ ಜನಗಳಿಗೆ ಸಾಹುಕಾರನ ಕುತಂತ್ರ ಬುದ್ಧಿಯನ್ನು ತಿಳಿಸುವ ರೀತಿ ಹೀಗಿದೆ "ಸಾಹುಕಾರನ ಮಾತು ಕೇಳಿ ನೀವು ಇಲ್ಲಿ ಕುಂತೀರಿ, ನಿಮಗೆ ಏನರ ನಾಚಿಕೆ, ಮಾನಗೀನ ಐತ್ಯಾ? ಹೊಲದ ವ್ಯವಹಾರ ನಮ್ಮ ನಮ್ಮ ನಡುವೆ ಇರಬೇಕು. ಕುಲಕ್ ಕೊಡಲಿ ಕಾಂವ ಮೂಲ ಅಂದಾಂಗ ಆ ತಿಗಡಾಪತಿ ರಾಮ ಸಾಹುಕಾರ ಬಡ್ಯಾಗ್ ಬಿದ್ದಾನ, ಈ ಸಾಹುಕಾರನ ಮಾತು ಕೇಳಿ ದೊಡ್ಡ ಘನಂದಾರಿ ಕೆಲಸ ಮಾಡ್ಲಾಕ್ ಇಲ್ಲಿ ಬಂದು ಕುಂತೀರಿ, ಒಂದು ವೇಳೆ ಅಪಮಾನ ಆಗಿ ಮಾನಾ ಹೋಯಿತು ಅಂತ್ಹೇಳಿ ಲಗಸೆಪ್ಪ ಮುತ್ಯಾ ಪತ್ರ ಬರೆದು ಉರ್ಲ ಹಾಕಿಕೊಂಡು ಸತ್ತಂದ್ರೆ ನಿಮ್ಮ ಗತಿ ಏನು? ನಿಮ್ಮ ನಂಬಿದವರು ಏನು ಮಾಡಬೇಕು, ನೀವು ಜೈಲಿಗೆ ಹೋಗಬೇಕಾಗ್ತದ, ಸಾಹುಕಾರನ ಮಾತು ಕೇಳಿ ನೀವು ಹಾಳಾಗೋದಲ್ದ, ನಿಮ್ಮ ಸಂಸಾರ ಮಣ್ಣುಪಾಲ ಆಗ್ತದ, ಸಾಹುಕಾರ ಮಾತ್ರ ಆರಾಮಾಗಿ ಇಲ್ಲಿ ಇರ್ತಾನ, ನೀವು ಜೈಲ್ಯಾಗ ಇರಬೇಕಾಗ್ತದ. ಅಷ್ಟಕ್ಕೂ ಲಗಸೆಪ್ಪ ನಿಮ್ಮ ರಕ್ತ ಸಂಬಂಧಿ ಅದಾನ ಗೊತ್ತದೇನ."[6] ಎಂದು ಹೇಳುವಲ್ಲಿ ಇನ್ಯಾರಿಗೋ ಮಾನಭಂಗ ಮಾಡಬೇಕಂತ ಹೊರಟಿದ್ದ ಸಾಹುಕಾರನ ಕುತಂತ್ರ ಭಂಗ ಮಾಡೋದಕ್ಕೆ ಎಲ್ಲಾ ದಲಿತ ವರ್ಗ ಒಟ್ಟಿಗೆ ಸೇರಿ ಸಾಹುಕಾರನ ಹತ್ತಿರ ಹೋಗಿ "ಶಂಕ್ರಪ್ಪ ಮಾತಿಗೆ ಮುಂದಾಗಿ ಸಾಹುಕಾರ್ರೆ ವಯಾದಾಗ ಸಣ್ಣವ್ರು ಇದ್ದೀರಿ ಬಹಳ ದಿನ ಬದುಕ ಬೇಕಾಗ್ಯಾದ, ಹೀಂಗ ಮಾಡಬ್ಯಾಡ್ರಿ, ಕಾಲ್ ಬದಲಾಗ್ಯಾದ, ನಿಮ್ಮಪ್ಪ ಏಟ ಒಳ್ಳೆವರಿದ್ರು, ನೀವ್ಯಾಕೆ ಇಂಥ ಖೋಡಿ ಖ್ಯಾಲಿಗಿ ಬಿದ್ದಿರಿ, ನಮ್ಮದು ನಾವು ಬಗೆಹರಿಸಿಕೊಳ್ಳುತ್ತೀವಿ ಅನ್ನುತ್ತಿದ್ದಂಗ ಶಂಕರನ ಮಗ ಹಣಮಂತ ಸಾಹುಕಾರ್ರೆ ನೋಡ್ರಿದು ಕೈಯಾಗ ಏನದ? ಎಂದು ಬಡಗಿ ತೋರಿಸಿ ನಾವು ಮೊದ್ಲಂಗಿಲ್ಲ, ಹಿಂಗ ಜಗಳ ಹಚ್ಚಿ ಮೋಜಾ ನೋಡ್ತಿರೇನು? ನಮ್ಮಾತ ನಿಮ್ಮ ಕೈಯಾಗಿನ ಬಡಗಿ ಆಗ್ಯಾನ ಅದಕ್ಕ ಮಾಡ್ಲಕತ್ತಿರೇನು ಎನ್ನುವಷ್ಟರಲ್ಲಿ ಹೆಣ್ಣುಮಗಳು ನಡುವೆ ಬಾಯಿ ಹಾಕಿ ಕೈಯಾಗ್ ಕಾರ ಐತಿ ಸಾಹುಕಾರ ಹಂಗೇನರ ನಡದಿದ್ರ ಖಾರ ಉಗ್ಗಿ ಹೊಡಿತಿದ್ದೆವು"[7] ಈ ಕಥೆಯಲ್ಲಿ ಮೇಲ್ವರ್ಗದ ಸಾಹುಕಾರ ದಲಿತ ಸಮುದಾಯವನ್ನು ನಾಶ ಮಾಡಬೇಕೆಂಬ ಉದ್ದೇಶದಿಂದ ಅವರಲ್ಲಿಯೇ ವಿಷಮ ಬೀಜ ಭೀತ್ತಿದ ಸಂಗತಿಗೆ ಎಚ್ಚೆತ್ತುಗೊಂಡ ದಲಿತ ಸಮುದಾಯ ಸಾಹುಕಾರನ ವಿರುದ್ಧ ಹೆಣ್ಣು ಗಂಡು ಎಲ್ಲರೂ ಪ್ರತಿಭಟನಾತ್ಮಕ ಮಾತುಗಳು ಆಡುವುದರಿಂದ ಆತನ ಕುತಂತ್ರ ಭಂಗವಾದುದ್ದನ್ನು ಹಾಗೂ ದಲಿತರು ರೊಚ್ಚನ್ನು, ಸಿಟ್ಟನ್ನು ಹಾಗೂ ದಲಿತ ಸಂಸ್ಕೃತಿಯನ್ನು ಅನಾವರಣ ಗೊಳಿಸುತ್ತದೆ.

ಚಮ್ಮಾವುಗೆ ಕಥಾಗುಚ್ಛದ ಇನ್ನೊಂದು ಕಥೆಯಾದ "ವತನ" ಕಥೆಯಲ್ಲಿಯೂ ದಲಿತ ಸಮುದಾಯದ ಕನಸಾದ ಭೂಮಿ ಪಡೆಯಬೇಕು ಎನ್ನುವದು ಅದಕ್ಕಾಗಿ ಹೋರಾಟ ಮಾಡುವುದು ಅಷ್ಟೇ ಅಲ್ಲದೆ ಅದಕ್ಕಾಗಿ ತಮ್ಮ ಶೌರ್ಯ ಸಾಹಸದ ಪರಂಪರೆಯನ್ನು ನೆನೆಯುವುದು ಶಿಕ್ಷಣ ಕಲಿಕೆಯೊಂದಿಗೆ ಮಾತ್ರ ದಲಿತ ಉದ್ಧಾರ ಬದಲಾವಣೆ ಸಾಧ್ಯ ಎಂದು ಈ ಕಥೆಯಲ್ಲಿ ಪೋತೆಯವರು ಹೇಳಿದ್ದಾರೆ

ಚಮ್ಮಾವುಗೆ ಕಥಾಸಂಕಲನದ ಇನ್ನೊಂದು ಕಥೆಯಾದ "ದಳಿ" ಎಂಬ ಕತೆಯು ಇಡೀ ದಲಿತರ ಬದುಕಿನ ಅನುಭವಗಳನ್ನು ಕಟ್ಟಿಕೊಡುವ ವಿಶಿಷ್ಟ ಕಥೆಯಾಗಿದೆ. ಈ ದಳಿ ಕಥೆಯ ಮುಖ್ಯ ವಸ್ತುವೆಂದರೆ ಗೌಡರ ವಿರುದ್ಧ ಪೊಲೀಸರಿಗೆ ಕೇಸು ದಾಖಲು ಮಾಡಿದ್ದು ಅದಕ್ಕಾಗಿ ತಿಪ್ಪಣ್ಣನನ್ನು ಗೌಡರಿಂದ ಶೋಷಣೆಗೆ ಒಳಗಾದ ಜನರು ಆತನ ಬೆನ್ನು ತಟ್ಟಿ ಹುರಿದುಂಬಿಸಿದರು. ಈ ಕಥೆಯಲ್ಲಿ ಕಥೆಗಾರರು ದಲಿತರು ತಮಗಾದ ಅವಮಾನಕ್ಕೆ, ಅನ್ಯಾಯಕ್ಕೆ ಕಾನೂನಿನ ಮೊರೆ ಹೋಗಬೇಕೆಂಬ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ಆದರೆ ದಲಿತರ ರಕ್ಷಣೆಗಾಗಿ ಇರುವ ಕಾನೂನುಗಳನ್ನು ಹೇಗೆ

ಶ್ರೀಮಂತರು, ದರ್ಪದಿಂದ ದುಡ್ಡಿನಿಂದ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬುದಕ್ಕೆ ಈ ಮಾತೆ ಸಾಕ್ಷಿ "ಏನ್ರಲೇ ನಿಮ್ಮ ಕಾನೂನ ಏನ್ ಮಾಡ್ತು ನೋಡು, ನಿಮ್ಮವರ ಸಾಕ್ಷಿ ಹೇಳ್ಯಾರ, ಸಾಯಿಬ ನಮ್ಮವ ಅದಾನ"[8] ಎಂದು ಗೌಡರು ಕೊಟ್ಟ ಉತ್ತರ ವರ್ತಮಾನದ ಸಾಮಾಜಿಕ ವ್ಯವಸ್ಥೆಗೆ ಹಿಡಿದ ಕನ್ನಡಿ ಯಾಗಿದೆ. ಅಷ್ಟೇ ಅಲ್ಲದೆ ದಲಿತರು ಗೌಡರ ದರ್ಪ ದಳಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದ ಅಸಹಾಯಕತೆ ದಲಿತ ಲೋಕವೊಂದನ್ನು ತೆರೆದು ತೋರಿಸುತ್ತದೆ.

ಚಮ್ಮಾವುಗೆ ಕಥಾ ಸಂಕಲನವು "ಅಸ್ಪೃಶ್ಯತೆ, ಮೇಲು–ಕೀಳು, ಶೋಷಣೆ, ಅಪಮಾನ, ನೋವು, ತಲ್ಲಣಗಳಂತ ವಸ್ತುಗಳನ್ನು ಒಳಗೊಂಡಿರುವ ಈ ಕಥಾ ಸಂಕಲನವು ದಲಿತರ ವಾಸ್ತವ ಬದುಕಿಗೆ ಕನ್ನಡಿ ಹಿಡಿಯುವಂತಿದೆ"[9] ಎಂದು ಡಾ. ದಸ್ತಗೀರ್ ಸಾಬ್ ದಿನ್ನಿ ಅವರ ಹೇಳುವ ಮಾತು ಔಚಿತ್ಯ ಪೂರ್ಣವಾಗಿದೆ.

ಒಟ್ಟಾರೆಯಾಗಿ ಚಮ್ಮಾವುಗೆಯ ಕಥೆಗಳು ನಡೆದ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ಸ್ವಾತಂತ್ರ್ಯ ಸಿಕ್ಕು 75 ವರ್ಷ ಉರುಳಿದರು ಸಹಿತ ಈಗಲೂ ಸಹಿತ ಅನಾದಿ ಕಾಳದ ಅಸ್ಪೃಶ್ಯತೆ, ಅಸಮಾನತೆ, ದಬ್ಬಾಳಿಕೆ, ಶೋಷಣೆಗಳು ಪ್ರಸ್ತುತ ದಿನಮಾನಗಳವರೆಗೂ ಆಚರಣೆಯಲ್ಲಿರುವುದು ದರುಂತದ ಸಂಗತಿಯಾಗಿದೆ. ಹಾಗಾಗಿ ಕಥೆಗಾರರಾದ ಪ್ರೊಫೆಸರ್ ಹೆಚ್. ಟಿ. ಪೋತೆಯವರು ಚಮ್ಮಾವುಗೆಯಲ್ಲಿ ದಲಿತರನ್ನು ಮೇಲ್ವರ್ಗದವರು ಈಗಲೂ ಹೇಗೆ ನೋಡುತ್ತಾರೆ ಎನ್ನುವ ಸಾಮಾಜಿಕ ವ್ಯವಸ್ಥೆಯನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ.

**ಕೊನೆಟಿಪ್ಪಣಿಗಳು**

1. ಪೋತೆ, ಎಚ್. ಟಿ. (2023). *ಕಪ್ಪುನೆಲದ ಹಾಡು.* ಸಪ್ನ ಬುಕ್ ಹೌಸ್. ಪುಟ. 6,7
2. ಅದೇ. ಪುಟ.6,7
3. ಅದೇ. ಪುಟ.31
4. ಅದೇ. ಪುಟ.32
5. ಅದೇ. ಪುಟ.52–54
6. ಅದೇ. ಪುಟ.43
7. ಅದೇ. ಪುಟ.44,
8. ಅದೇ. ಪುಟ.92,
9. ದಸ್ತಗೀರ್ ಸಾಬ್ ದಿನ್ನಿ. (2014). ಅವ್ವ ಸಂಬಂಧಗಳ ವಿಘಟನೆಯನ್ನು ಪ್ರಶ್ನಿಸುವ ಕಥೆ. **ಗ್ರಂಥ:** ಶ್ರೀಶೈಲ ನಾಗರಾಳ ಮತ್ತು ಡಾ. ಎಂ.ಬಿ. ಕಟ್ಟಿ, (ಸಂ.) *ಚಮ್ಮಾವುಗೆ ಅನುಸಂಧಾನ.* ಡಾ. ಸಿರಿಗಿರಿ ಪ್ರಕಾಶನ, ಪುಟ.4